**ಒ.ಎಸ್.ನಂಬ್ರ: 295/2019            ಪಿ.ಡಬ್ಲ್ಯೂ: 3**

ದಿನಾಂಕ: 31-07-2024 ರಂದು ಸಾಕ್ಷಿಯನ್ನು ಪುನಃ ಕರೆಸಿ  ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಪಾಟಿ ಸವಾಲು:   ಪ್ರತಿವಾದಿ ಪರ ವಕೀಲರಾದ ಶ್ರೀ ಬಿ .ಎಸ್ ಎಸ್. ರವರಿಂದ

ನಾನು ಈ ದಾವೆಯಲ್ಲಿ ಈ ದಿನ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸಾಕ್ಷಿ ಹೇಳಲು ಬಂದಿರುತ್ತೇನೆ. ಈ ದಾವೆಯನ್ನು ಪುಟ್ಟಿಯವರು  ಹಾಕಿರುತ್ತಾರೆ. ಪುಟ್ಟಿ ಮತ್ತು ಅವರ ಮಕ್ಕಳು ಬ್ರಹ್ಮಾವರ ತಾಲೂಕಿನ ಮೂಡುಗಿಳಿಯಾರು ಗ್ರಾಮದಲ್ಲಿ ಇದ್ದಾರೆ ಎಂದರೆ ಸರಿ. ನನಗೆ ಮದುವೆ ಆಗಿ 40 ವರ್ಷ ಆಗಿದ್ದು, ನಾನು ನೋಡಿದಾಗೆ ಅಲ್ಲೇ ವಾಸವಾಗಿದ್ದರು. ಪ್ರತಿವಾದಿಗಳ ಪರಿಚಯ ಇಲ್ಲ. ದಾವಾ ಸ್ವತ್ತನ್ನು ನಾನು ನೋಡಿರುತ್ತೇನೆ. ದಾವ ಸ್ವತ್ತಿನ ಚೆಕ್ಕುಬಂದಿಯನ್ನು ಹೇಳಲು ಸಾಧ್ಯವಿಲ್ಲ. ದಾವಾ ಸ್ವತ್ತಿನಲ್ಲಿ ಯಾರು ಸಾಗುವಳಿ ಮಾಡುತ್ತಿದ್ದಾರೆ ಎಂದು ನಾನು ನೋಡಿರುವುದಿಲ್ಲ. ಪ್ರತಿವಾದಿಗಳು ಕ್ರಯದ ಕರಾರು ಪತ್ರ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಪುಟ್ಟಿರವರು ನನಗೆ ಸಾಕ್ಷಿ ಹೇಳಲು  ಕೇಳಿರುತ್ತಾರೆ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಎಲ್ಲಿ ತಯಾರು  ಮಾಡಲಾಗಿದೆ, ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ವಾದಿಯು ಯಾವ ಉದ್ದೇಶಕ್ಕೆ ಈ ದಾವೆ ಹಾಕಿದ್ದಾರೆ, ಪ್ರತಿವಾದಿಗಳು ಏನು ಸಾಧನೆ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ವಾದಿರವರು ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಪುಟ್ಟಿಯವರು ಬೆಂಗಳೂರಿನಲ್ಲಿ ಇದ್ದು, ಊರಿಗೆ ಬಂದಾಗ ನಮ್ಮ ಮನೆಗೆ ಬರುತ್ತಾರೆ ಎಂದರೆ ಸರಿ.  ಬೆಂಗಳೂರಿನಿಂದ ಬಂದಾಗ ನನ್ನ ಕಷ್ಟಕ್ಕೆ ಸಹಾಯ ಮಾಡುತ್ತಾರೆ ಎಂದರೆ ಸರಿ. ನನಗೆ ಏನು ವಿಷಯ ಗೊತ್ತಿಲ್ಲದಿದ್ದರೂ ಅವರ ಒತ್ತಡ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1992 ರಲ್ಲಿ ಪುಟ್ಟಿ ಹೆಂಗ್ಸು  ಪ್ರತಿವಾದಿಗಳಿಗೆ ಕರಾರು ಮಾಡಿ ಸ್ವಾಧೀನ ನೀಡಿರುತ್ತಾರೆ ಎಂದರೆ ಸರಿಯಲ್ಲ. 1992 ರಿಂದ ಇಂದಿನವರೆಗೂ ಪ್ರತಿವಾದಿಗಳ ಸ್ವಾಧೀನದಲ್ಲಿದ್ದು, ಈಗಲೂ ಅವರೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಗಳ ಮನೆ ಹತ್ತಿರ ಇದೆ ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ಸುಳ್ಳು ದಾವೆಯನ್ನು ಸಲ್ಲಿಸಿದ್ದು, ನಾನು ಆ ಸುಳ್ಳು ದಾವೆಗೆ ಪೂರಕವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ 2019 ಜನವರಿ ಯ ಮಳೆಗಾಲದಲ್ಲಿ ಅತಿಕ್ರಮ ಪ್ರವೇಶ ಮಾಡಿಲ್ಲ, ಯಾವುದೇ ಶೆಡ್ ನಿರ್ಮಿಸಲು ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ. ವಾದಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ

ಓ.ಹೇ.ಕೇ.ಸ.ಇದೆ                    ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**